



**ದೀಪ್ತಾ ಎಚ್.ಎ.**
1ನೇ ತರಗತಿ, ಸುದರ್ಶನ ವಿದ್ಯಾಮಂದಿರ, ಬೆಂಗಳೂರು

ಕುಂಚ ಪ್ರಪಂಚ





**ಧೀಮಂತ ಸಂದೇಶ ಎಂ.**
1ನೇ ತರಗತಿ, ಪೂರ್ಣಪ್ರಜ್ಞ ಎಜುಕೇಶನ್ ಸೆಂಟರ್, ಬೆಂಗಳೂರು





**ಆದ್ರಿಕ್ ಆರ್.**
1ನೇ ತರಗತಿ, ಬ್ರಿಗೇಡ್ ಸ್ಕೂಲ್, ಬೆಂಗಳೂರು



# ತಿಮ್ಮನು ಜಾತ್ರೆಗೆ ಹೋಗಿದ್ದ

■ **ಶೇಖರಯ್ಯ ಟಿ.ಎಚ್.**

ಕಲೆ: ಸಂತೋಷ್ ಸಸಿಹಿತ್ಲು

ಅಮ್ಮನ ಜೊತೆಗೆ ತಿಮ್ಮನು ಒಮ್ಮೆ
ಜಾತ್ರೆಗೆ ಹೋಗಿದ್ದ
ಹಿಂಡಿಂಡಾಗಿ ಸೇರಿದ ಜನರ
ಕಂಡು ಬೆರಗಾದ

ಕಳೆದು ಗಿಳೆದು ಹೋದೆನು ಎಂದು
ಅಮ್ಮನ ಕೈ ಹಿಡಿದ
ಒಬ್ಬನೇ ಎಲ್ಲೋ ಹೋಗದೆ ಭಯದಿ
ಅಮ್ಮನ ಜೊತೆಗಿದ್ದ

ದೂರದಿ ನಿಂತು ಹೋಗೋ ತೇರಿಗೆ
ಬಾಳೆಯ ಹಣ್ಣೆಸೆದ
ಕರಗಳ ಜೋಡಿಸಿ ದೇವಗೆ ನಮಿಸಿ
ಒಳಿತನು ಮಾಡೆಂದ

ವಿಧ ವಿಧವಾದ ಗೊಂಬೆಯ ಕಂಡು
ತನಗೂ ಬೇಕೆಂದ
ಕೀಲಿಯ ಗೊಂಬೆ ಓಡುವ
ಕಾರನು ಕೊಂಡ್ಕಂಡ

ಬೆಂಡು ಬತ್ತಾಸು ಖಾರ ಮಂಡಕ್ಕಿ
ಎಲ್ಲರ ಜೊತೆ ಸವಿದ
ಐಸು ಗೀಸು ಬೇಡ ಅಂದಾಗ
ಮುನಿಸನು ಮಾಡ್ಕೊಂಡ

ಸಂಜೆಯಾಗುತಲಿ ಮನೆಯ ಕಡೆಗೆ
ಅಮ್ಮನ ಜೊತೆ ನಡೆದ
ಜಾತ್ರೆಲಿ ತಾನು ಕಂಡುದನೆಲ್ಲ
ತಾತನಿಗೆ ಹಿಗ್ಗಿ ಹೇಳ್ಕೊಂಡ ■